ಕ್ಷೇತ್ರಾಭಿವೃದ್ಧಿ ಕೆಲಸಕಾರ್ಯಗಳು

೩೫೭. ಶ್ರೀ ಮಾಲೀಕಯ್ಯ ಎ. ಗುತ್ತೇದಾರ್ (ಅಫಜಲ್‌ಪುರ್).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್‌ಗಳು ಕಾರ್ಯರೂಪಕ್ಕೆ ಬಂದ ಮೇಲೆ ಶಾಸಕರು ತಮ್ಮ ಮತದಾರರಿಗೆ ಕ್ಷೇತ್ರದ ಕೆಲಸ ಮಾಡಲು ಆಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮಹಾರಾಷ್ಟ್ರದಲ್ಲಿ ಶಾಸಕರುಗಳಿಗೆ ಅವರ ಕ್ಷೇತ್ರಾಭಿವೃದ್ಧಿಗಾಗಿ ಪ್ರತಿವರ್ಷ ೨೦ ಲಕ್ಷ ರೂ.ಗಳನ್ನು ಸರ್ಕಾರವು ನಿಗದಿ ಪಡಿಸಿರುವಂತೆ ಈ ರಾಜ್ಯದಲ್ಲಿ ಆ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರವು ಆಲೋಚಿಸುವುದೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ, ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು).—

ಅ) ಇಲ್ಲ

ಆ) ಇಲ್ಲ

ಶ್ರೀ ಮಾಲೀಕಯ್ಯ ಗುತ್ತೇದಾರ್.—ಮಾನ್ಯ ಅಧ್ಯಕ್ಷರೇ, ಈ ಸದನದ ಎಲ್ಲ ಶಾಸಕರಿಗೆ ಮಹತ್ವವಾದ ಪ್ರಶ್ನೆ ಇದಾಗಿದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಾದ ಮೇಲೆ ಶಾಸಕರಿಗೆ ಆ ಭಾಗದಲ್ಲಿ ಅಭಿವೃದ್ಧಿ ಕೆಲಸ ಮಾಡುವಾಗ ಅನೇಕ ತೊಂದರೆಯಾಗುತ್ತಿದೆ. ಏತಕ್ಕೆಂದರೆ ಮಂಡಲ ಪಂಚಾಯಿತಿ ಪ್ರಧಾನರು ಅಡಚಣೆ ಉಂಟು ಮಾಡುತ್ತಿದ್ದಾರೆ. ನೆರೆರಾಜ್ಯವಾದ ಮಹಾರಾಷ್ಟ್ರದಲ್ಲಿ ಅಲ್ಲಿಯ ಸರ್ಕಾರ ಅಲ್ಲಿಯ ಶಾಸಕರಿಗೆ ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಶಾಸಕರಿಗೆ ಅನುಕೂಲವಾಗುವಂತೆ ವರ್ಷಕ್ಕೆ ೨೦ ಲಕ್ಷ ರೂಪಾಯಿಗಳನ್ನು ಸಬ್ ಪ್ಲಾನ್‌ನಲ್ಲಿ ಶಾಸಕರು ಯಾವ ಕೆಲಸ ತೆಗೆದುಕೊಳ್ಳುತ್ತಾರೋ ಅದ್ಯಾಗಿ ವಿಶೇಷವಾಗಿ ಹಣ ಬಿಡುಗಡೆ ಮಾಡುತ್ತಿದ್ದಾರೆ, ಅಂತಹ ಒಂದು ಅನುಕೂಲವನ್ನು ನಮ್ಮ ಶಾಸಕರಿಗೂ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಪಂಚಾಯಿತಿ ರಾಜ್ಯ ಸಂಸ್ಥೆಗಳು ಬಂದ ನಂತರ ಶಾಸಕರ ಜವಾಬ್ದಾರಿಯಲ್ಲಿ ಸ್ವಾಭಾವಿಕವಾಗಿ ವ್ಯತ್ಯಾಸ ಆಗಿದೆ. ಪಂಚಾಯಿತಿ ರಾಜ್ಯ ಸಂಸ್ಥೆಗಳು ಬರುವುದಕ್ಕಿಂತಲೂ ಮುಂಚೆ ಪ್ರತಿಯೊಂದು ಕೆಲಸಕ್ಕೆ ಶಾಸಕರು ಜವಾಬ್ದಾರರಾಗುತ್ತಿದ್ದರು. ಅವರು ನೇರವಾಗಿ ಸರ್ಕಾರದ ಕಡೆಯಿಂದ ಕೆಲಸ ಮಾಡಿಸುತ್ತಿದ್ದರು. ಇವತ್ತು ಇಡೀ ದೇಶಾದ್ಯಂತ ವಿಶೇಷವಾಗಿ ಕರ್ನಾಟಕದಲ್ಲಿ ಅಧಿಕಾರಗಳನ್ನು ನಾವು ಹೆಚ್ಚಿನ ಮಟ್ಟದಲ್ಲಿ ಆಯಾ ಮಟ್ಟಕ್ಕೆ, ಅಂದರೆ ಜಿಲ್ಲಾಪರಿಷತ್ತು ಮತ್ತು ತಾಲ್ಲೂಕು ಮಂಡಲ ಕ್ಷೇತ್ರಕ್ಕೆ ಕೊಟ್ಟಿರುವೆಗ ಶಾಸಕರ ಜವಾಬ್ದಾರಿಯಲ್ಲಿ ವ್ಯತ್ಯಾಸ ಆಗಿದ್ದು ಸ್ವಾಭಾವಿಕ. ಆದರೆ ಅವರ ಜವಾಬ್ದಾರಿ ಕಡಿಮೆ ಆಗಿದೆ ಎಂದು ಅಲ್ಲ. ಅವರಿಗೂ ಮತ್ತು ಸರ್ಕಾರಕ್ಕೆ ನೇರವಾದ ಸಂಬಂಧ ಇದೆ. ಮತ್ತೆ ಕೆಲಸಗಳು ಸರಿಯಾದ ರೀತಿಯಲ್ಲಿ ಜಿಲ್ಲಾಪರಿಷತ್ತಿನ ಪತಿಯಿಂದ ಆಗುತ್ತಿದೆಯೋ ಇಲ್ಲವೋ ಎಂದು ನೋಡುವ ಜವಾಬ್ದಾರಿ ಕೂಡಾ ಅವರ ಮೇಲಿದೆ ಆ ಕಾರಣದಿಂದ ಅವರ ಜವಾಬ್ದಾರಿ ಕಡಿಮೆ ಆಗಿದೆ ಎಂದು ನಾನು ಒಪ್ಪುವುದಕ್ಕೆ ತಯಾರು ಇಲ್ಲ. ಒಂದು ದೃಷ್ಟಿಯಿಂದ ಅದನ್ನು ನೋಡಿಕೊಳ್ಳುವ ಜವಾಬ್ದಾರಿ ಅವರ ಮೇಲೆ ಇರುವುದರಿಂದ ಕೆಲಸದ ವ್ಯಾಪ್ತಿ ಜಾಸ್ತಿಯಾಗಿದೆ ಎಂದು ಹೇಳಬಹುದು. ಮತ್ತೆ ಮಹಾರಾಷ್ಟ್ರದ ಒಂದು ಉದಾಹರಣೆಯನ್ನು ಅವರು ಕೊಟ್ಟಿದ್ದಾರೆ. ಮಹಾರಾಷ್ಟ್ರದಲ್ಲಿ ಜಿಲ್ಲಾ ಮಟ್ಟದಲ್ಲಿ ಒಂದು ಡಿಸ್ಟ್ರಿಕ್ಟ್ ಪ್ಲಾನಿಂಗ್ ಬೋರ್ಡ್ ತರಹ ಮಾಡಿ ಜಿಲ್ಲಾ ಮಂತ್ರಿಗಳು ಅದರ ಅಧ್ಯಕ್ಷರು ಆಗಿರುತ್ತಾರೆ ಹಾಗೂ ಅವರಲ್ಲಿ ಶಾಸಕರೂ ಇರುತ್ತಾರೆ ಡೆಪ್ಯೂಟಿ ಕಮೀಷನರ್ ಅವರು ಅದಕ್ಕೆ ಕಾರ್ಯದರ್ಶಿಗಳಾಗಿರುತ್ತಾರೆ ಅಂತಹ ಜಿಲ್ಲಾ ಮಟ್ಟದಲ್ಲಿ ಒಂದು ಪ್ಲಾನಿಂಗ್ ಬೋರ್ಡ್ ತರಹ ಮಾಡಿ ಅವರಿಗೆ ೨೦ ಲಕ್ಷ ರೂಪಾಯಿ ಏನು ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕದಲ್ಲಿ ಏಕೆ ಮಾಡಬಾರದು ಎಂಬುದು ಅವರ ಪ್ರಶ್ನೆ ಈಗ ನಮ್ಮ ವ್ಯವಸ್ಥೆ ಪ್ರಕಾರ ನಾವು ಜಿಲ್ಲಾಪರಿಷತ್ ರಚನೆ ಮಾಡಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಸಮಿತಿಯನ್ನು ಬರಪಡಿಸುವ ವಿಚಾರ ಸರ್ಕಾರಕ್ಕೆ ಇದೆ. ಅದನ್ನು ಬಲಪಡಿಸಬೇಕೆಂದು ನನ್ನ ವೈಯಕ್ತಿಕ ಅಭಿಪ್ರಾಯವು ಆಗಿದೆ. ಆದರೆ ಅದನ್ನು ಬಿಟ್ಟು ಬೇರೆ ಜಿಲ್ಲಾಮಟ್ಟದಲ್ಲಿ ಮಂತ್ರಿಗಳು ಮತ್ತು ಶಾಸಕರನ್ನು ಒಳಗೊಂಡ ಬೇರೆ ಒಂದು ಸಂಸ್ಥೆಯಾತಿ ನೇರವಾಗಿ ಹಣವನ್ನು ಡಿಸ್ಟ್ರಿಬ್ಯೂಷನ್ ರೀತಿಯಲ್ಲಿ ಕೊಡುವ ವ್ಯವಸ್ಥೆ ನಮ್ಮ ಕರ್ನಾಟಕದಲ್ಲಿ ಇಲ್ಲ. ಆ ರೀತಿ ವ್ಯವಸ್ಥೆ ಮಾಡುವ ವಿಚಾರ ಕೂಡಾ ನಮಗೆ ಇಲ್ಲ. ಹಾಗೆಂದರೆ

ಅವರಿಗೆ ಡಿಸ್ಕ್ರಿಷನರಿ ಗ್ರ್ಯಾಂಟ್ ಅನ್ನು ನಾವು ಕೊಟ್ಟಿಲ್ಲ ಎಂದು ಅಲ್ಲ. ಕರ್ನಾಟಕದಲ್ಲಿ ಪರ್ ಕ್ಯಾಪಿಟಾ ಗ್ರ್ಯಾಂಟ್ ಪ್ರಕಾರ ನಾವು ೨೭ ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಅದು ಯಾವ ಒಂದು ಸ್ಕೀಮ್‌ಗೂ ಸಂಬಂಧಪಟ್ಟದ್ದೂ ಅಲ್ಲ. ಇದು ಅನ್‌ಟೈಡ್ ಗ್ರ್ಯಾಂಟ್ ಆದರಲ್ಲಿಷ್ಟೇ. ೨% ರಷ್ಟು ಎಂದರೆ. ಸುಮಾರು ೭ ಕೋಟಿ ರೂಪಾಯಿ ಜಿಲ್ಲಾಪರಿಷತ್ತಿಗೆ ಹೋದರೆ ಉಳಿದ ೭% ಪರ್ಸೆಂಟ್ ಭಾಗದ ಹಣ ಮಂಡಲಕ್ಕೆ ಹೋಗಬೇಕಾಗುತ್ತದೆ. ಇದು ಅಲ್ಲದೇ ಹೆಚ್ಚು ಕಡಿಮೆ ೩೦೦ ಕೋಟಿ ರೂಪಾಯಿ ಪ್ಲಾನ್ ಫಂಡ್ಸ್ ಪಂಚಾಯಿತಿ ರಾಜ್ಯ ಸಂಸ್ಥೆಗಳಿಗೆ ಏನು ಕೊಡುತ್ತಿದ್ದೇವೆ. ಅದರಲ್ಲಿ ಶೇಕಡಾ ೧೦ರಷ್ಟು ಹಣವನ್ನು ಡೆವಲಪ್‌ಮೆಂಟಲ್ ಹೆಡ್‌ನಲ್ಲಿ ಬದಲಾವಣೆ ಮಾಡುವಂತಹ ಒಂದು ಅಧಿಕಾರವನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟಿದ್ದೇವೆ. ಅಭಿವೃದ್ಧಿ ಕಾರ್ಯಗಳಿಗೆ ಏನು ೩೦೦ ಕೋಟಿ ಸಿಗುತ್ತದೆ, ಆದರಲ್ಲಿ ೩೦ ಕೋಟಿ ರೂಪಾಯಿಗಳಷ್ಟು ಹಣವನ್ನು ಇಂಟರ್‌ನಲ್ ಚೇಂಜ್ ಮಾಡಿಕೊಳ್ಳುವುದಕ್ಕೆ ಹೆಡ್ ಛೇಂಜ್ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ ಎಂದರೆ ಇವೆರಡರಿಂದ ೨೭ ಕೋಟಿ ರೂಪಾಯಿ ಹಾಗೂ ೩೦ ಕೋಟಿ ರೂಪಾಯಿ ಎಂದರೆ ಒಟ್ಟು ೫೭ ಕೋಟಿ ರೂಪಾಯಿವರೆಗೆ ಖರ್ಚು ಮಾಡಲು ಅವರಿಗೆ ಅಧಿಕಾರ ಇದೆ. ಇದು ನಮ್ಮ ರಾಜ್ಯದಲ್ಲಿ ಇರತಕ್ಕ ಒಂದು ವ್ಯವಸ್ಥೆ.

ಇನ್ನೂ ಒಂದು ಮುಖ್ಯವಾದ ವಿಷಯವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲಿಕ್ಕೆ ನಾನು ಇಷ್ಟಪಡುತ್ತೇನೆ. ಇಡೀ ಕರ್ನಾಟಕ ರಾಜ್ಯದಲ್ಲಿ ಒಂದು ಅಭಿಪ್ರಾಯವಿದೆ. ಅದೇನೆಂದರೆ ತಾಲ್ಲೂಕು ಮಟ್ಟದಲ್ಲಿ ನಾವು ಸಂಪೂರ್ಣವಾಗಿ ಮರೆತಿದ್ದೇವೆ. ಜಿಲ್ಲಾಪರಿಷತ್ ಮತ್ತು ಮಂಡಲ್‌ಗಳ ಮಧ್ಯದಲ್ಲಿ ಏನೂ ಇಲ್ಲ, ಎನ್ನುವ ಅಭಿಪ್ರಾಯವಿದೆ. ಈಗಿನ ವ್ಯವಸ್ಥೆಯಲ್ಲಿ ಅಭಿವೃದ್ಧಿ ಕೆಲಸಗಳಿಗೆ ಶಾಸಕರಿಗೆ ಸ್ವಲ್ಪ ತೊಂದರೆಯಾಗಿರಬಹುದು. ಅದಕ್ಕೊಸ್ಕರ ನನ್ನ ಅಭಿಪ್ರಾಯದಲ್ಲಿ ಇದು ಚರ್ಚೆಯಾಗಬೇಕು. ಆದಕ್ಕಾಗಿ ಈ ವಿಷಯವನ್ನು ತಮ್ಮ ಮುಂದಿಡುತ್ತಿದ್ದೇನೆ. ಇದು ಸರ್ಕಾರದ ತೀರ್ಮಾನವಲ್ಲ. ಆದರೆ ಈ ದಿಶೆಯಲ್ಲಿ ವಿಚಾರ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಮಂಡಲ್–೧ ಸ್ಕೀಮ್ ಮಂಡಲ್–೨ ಸ್ಕೀಮ್‌ಗಳೆಂದು ಎರಡು ಸ್ಕೀಮ್‌ಗಳಿವೆ. ಮಂಡಲ್–೧ ಸ್ಕೀಮ್‌ಗಳಲ್ಲಿ ನೇರವಾಗಿ ಅವರೇ ಇಂಪ್ಲಿಮೆಂಟ್ ಮಾಡುತ್ತಾರೆ. ಮಂಡಲ್–೨ ಸ್ಕೀಮ್‌ನಲ್ಲಿ ಅದು ಮಂಡಲ್ ವ್ಯಾಪ್ತಿಯಲ್ಲಿ ಅನುಷ್ಠಾನಕ್ಕೆ ಬಂದರೂ ಜಿಲ್ಲಾಪರಿಷತ್‌ನವರು ಅದನ್ನು ಇಂಪ್ಲಿಮೆಂಟ್ ಮಾಡುತ್ತಾರೆ. ಮಂಡಲ್–೨ ಸ್ಕೀಮ್‌ನಲ್ಲಿ ನ್ಯಾಯವಾಗಿ ಬಹಳಷ್ಟು ಕೆಲಸ ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನ ಮಾಡುವಂತಹ ಸ್ಕೀಮ್‌ಗಳಾಗಿವೆ. ಆ ಕಾರಣದಿಂದ ನಮ್ಮ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಏನಾದರೂ ಒಂದು ನ್ಯೂನತೆಗಳಿದ್ದರೆ ವೀಕ್‌ನೆಸ್‌ಗಳು ತಾಲ್ಲೂಕು ಮಟ್ಟದಲ್ಲಿದ್ದರೆ ಅದನ್ನು ಸರಿಪಡಿಸುವ ಸರ್ವ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತದೆ. ನಮ್ಮ ಪಕ್ಷದ ವತಿಯಿಂದ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಅದರ ಬಗ್ಗೆ ನಾವು ಆಳವಾಗಿ ಯೋಚನೆ ಮಾಡುತ್ತಿದ್ದೇವೆ. ಜಿಲ್ಲಾಪರಿಷತ್ ಮತ್ತು ಮಂಡಲ್‌ಗಳಿಗೆ ಧಕ್ಕೆ ಬರದಹಾಗೆ ತಾಲ್ಲೂಕು ಮಟ್ಟಕ್ಕೆ ಹೆಚ್ಚಿನ ಬಲ ಕೊಡಲಿಕ್ಕೆ ಹೇಗೆ ಸಾಧ್ಯ ಎಂಬುದರ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಕೂಡ ಅವರ ಬಗ್ಗೆ ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು.—ಉಪ ಪ್ರಶ್ನೆಯ ಅವಶ್ಯಕತೆಯಿಲ್ಲ. ಮಾನ್ಯ ಧರ್ಮಸಿಂಗ್‌ರವರೇ ಸ್ವಲ್ಪ ನಾನು ಹೇಳುವುದನ್ನು ತಾವು ಕೇಳಿ.

ಶ್ರೀ ಧರ್ಮಸಿಂಗ್.—ಈಗ ಮಾನ್ಯ ಸದಸ್ಯರಾದ ಮಾಲಿಕಯ್ಯ ಗುತ್ತೇದಾರ್‌ರವರ ಪ್ರಶ್ನೆಗೆ ಮಂತ್ರಿಗಳಿಂದ ನೇರವಾದ ಉತ್ತರ ಬಂದಿಲ್ಲ. ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳ ರಚನೆಯಾದ ಮೇಲೆ ಶಾಸಕರಿಗೆ ಯಾವ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದಕ್ಕಾಗಿ ಮಹಾರಾಷ್ಟ್ರದಲ್ಲಿ ಏನು ವ್ಯವಸ್ಥೆ ಮಾಡಿದ್ದಾರೆ ಅದನ್ನು ಇಲ್ಲೂ ಕೂಡ ಮಾಡಿಯೆಂದು ಕೇಳಿದ್ದಾರೆ. ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳಿಗೆ ಏನು ಹಣವನ್ನು ಒದಗಿಸುತ್ತಿದ್ದಾರೆನ್ನುವುದನ್ನು ಅವರು ತಾತ್ವಿಕವಾಗಿ ಹೇಳಿದ್ದಾರೆ. ಅದನ್ನು ಡಿಮ್ಯಾಂಡ್ಸ್ ಬಂದಾಗ ವಿವರವಾಗಿ ಹೇಳಿ. ಮಾಲಿಕಯ್ಯ ಗುತ್ತೇದಾರ್‌ರವರು ಶಾಸಕರಿಗೆ ಆಗುತ್ತಿರುವ ಅನಾನುಕೂಲತೆಯ ಬಗ್ಗೆ ಹೇಳಿದ್ದಾರೆ. ನಾನು ಕೂಡ ಆ ಬಗ್ಗೆ ಹೇಳುತ್ತೇನೆ. ಜಿಲ್ಲಾ ಪರಿಷತ್ ಬಂದಮೇಲೆ ಜಿಲ್ಲಾಪರಿಷತ್‌ನ ಸದಸ್ಯರು ಹೇಳಿದ ಕೆಲಸಗಳು ಆಗುತ್ತವೆ. ಶಾಸಕರು ಹೇಳಿದ ಕೆಲಸಗಳು ಆಗುವುದಿಲ್ಲ. ಅದರ ಬಗ್ಗೆ ಸರ್ಕಾರ ಏನು ಶಿದ್ದುಪಡಿ ತರಂತ್ತಿದೆ ಎಂದು ಮಾನ್ಯ ಮಂತ್ರಿಗಳು ನೇರವಾಗಿ ಉತ್ತರ ಹೇಳಬೇಕು.

ಶ್ರೀ ಎಂ.ವೈ. ಘೋರ್ಪಡೆ.—ಈ ಅಭಿಪ್ರಾಯ ಸರಿಯಲ್ಲವೆಂದು ನಾನು ನೇರವಾಗಿ ಮತ್ತು ಸ್ಪಷ್ಟವಾಗಿ ಉತ್ತರವನ್ನು ಕೊಡುತ್ತಿದ್ದೇನೆ.

ಶ್ರೀ ಎಸ್.ಹೆಚ್. ಕೌಜಲಗಿ.—ಈ ಪರಿಸ್ಥಿತಿ ಮಂತ್ರಿಗಳಾದವರಿಗೆ ಗೊತ್ತಾಗುವುದಿಲ್ಲ. ಶಾಸಕರಾದವರಿಗೆ ಮಾತ್ರ ಗೊತ್ತಾಗುತ್ತದೆ.

ಸಭಾಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರವೇಳೆ ಮುಗಿಯಿತು. ಮತ್ತೆ ಈ ಅವಧಿಯನ್ನು ವ್ಯಾಂದುವರಿಸಲು ಸಾಧ್ಯವಿಲ್ಲ. ಪಂಚಾಯತ್ ರಾಜ್ ಬೇಡಿಕೆಗಳ ಬಗ್ಗೆ ಈ ಸದನದಲ್ಲಿ ಎರಡು ದಿವಸಗಳ ಕಾಲ ಚರ್ಚೆಯಾಗುತ್ತದೆ. ಈ ಪ್ರಶ್ನೆ ಮತ್ತು ಉಪಪ್ರಶ್ನೆಗಳಿಂದ ಇವತ್ತು ಈ ಪ್ರಶ್ನೆ ಇತ್ಯರ್ಥವಾಗುವುದಿಲ್ಲ. ಈ ಬಗ್ಗೆ ಮಾನ್ಯ ಧರ್ಮಸಿಂಗ್‌ರವರು ಹೇಳಿದ್ದಾರೆ ಮಾಲಿಕಯ್ಯ ಗುತ್ತೇದಾರ್‌ರವರು ಮತ್ತು ಶಿವರಾಮೇಗೌಡರು ಸಹ ಹೇಳಿದ್ದಾರೆ. ಇದು ಗಹನವಾದ ವಿಚಾರ ಗಂಭೀರವಾದ ವಿಚಾರ, ಇದು ಪ್ರತಿಯೊಬ್ಬ ಶಾಸಕರಿಗೂ ನೇರವಾಗಿ ಸಂಬಂಧಪಟ್ಟಿರತಕ್ಕ ವಿಚಾರ. ಆದ್ದರಿಂದ ದೀರ್ಘವಾದ ಚರ್ಚೆಗೆ ಅವಕಾಶ ಕೊಡಬೇಕೆನ್ನುವುದೇ ನನ್ನ ಉದ್ದೇಶ. ಆದಕ್ಕೆ ಪಂಚಾಯತ್ ರಾಜ್ ಸಚಿವರ ಬೇಡಿಕೆಗಳು ಏನಿವೆ, ಅವು ಎರಡು ದಿವಸದ ಪೂರ್ಣ ಪ್ರಮಾಣದ ಚರ್ಚೆ ಈ ಸದನದಲ್ಲಿ ಇನ್ನು ಒಂದು ವಾರದಲ್ಲಿ ನಡೆಯುತ್ತದೆ. ಆಗ ತಾವು ಈ ವಿಚಾರಗಳನ್ನು ತೀವ್ರಗತಿಯಿಂದ ಚರ್ಚೆ ಮಾಡಬಹುದು.

ನಿಡಗುಂದಿಗೆ ೩೦ ಹಾಸಿಗೆಯುಳ್ಳ ಆಸ್ಪತ್ರೆ ಮಂಜೂರಾತಿ

೫೩೫. ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ನಿಡಗುಂದಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ೩೦ ಹಾಸಿಗೆಗಳ ದವಾಖಾನೆ ಮಂಜೂರಾಗಿರುವುದು ನಿಜವೇ ?

೨) ಹಾಗಿದ್ದರೆ, ಯಾವಾಗ ಪ್ರಾರಂಭ ಮಾಡಲಾಗುವುದು?

೩) ಇಲ್ಲದಿದ್ದಲ್ಲಿ, ಈ ವರ್ಷ ಮಂಜೂರು ಮಾಡುವ ವಿಚಾರ ಸರ್ಕಾರದಲ್ಲಿದೆಯೇ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)—

೧) ಮಂಜೂರಾಗಿಲ್ಲ.

೨) ಉದ್ಭವಿಸುವುದಿಲ್ಲ

೩) ಇಲ್ಲ

ಲಿಖಿತ ಮೂಲಕ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು, ಸಂಸದೀಯ ವ್ಯವಹಾರ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಪ್ರತಿ ವರ್ಷಕ್ಕೆ ಪ್ರತಿ ವಿದ್ಯಾರ್ಥಿಗೆ ತಗಲುವ ವೆಚ್ಚದ ಬಗ್ಗೆ

೬೬೩. ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಪ್ರತಿವರ್ಷ ಪ್ರತಿಯೊಬ್ಬ ವಿದ್ಯಾರ್ಥಿಗೆ ಸರ್ಕಾರವು ಎಷ್ಟು ಹಣವನ್ನು ವೆಚ್ಚ ಮಾಡುತ್ತಿದೆ ?

ಆ) ವಿದ್ಯಾರ್ಥಿಯು ಮೆಡಿಕಲ್ ಕೋರ್ಸ್‌ನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಎಷ್ಟು ಹಣ ವೆಚ್ಚವಾಗುತ್ತದೆ ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಮಂತ್ರಿಗಳು).—

ಅ) ಪ್ರತಿ ವರ್ಷಕ್ಕೆ ರೂ. ೩೭,೫೦೦.೦೦ (ಅಂದಾಜು) ವಿರ್ಚ್ ಆಗುತ್ತದೆ,

ಆ) ಸುಮಾರು ರೂ. ೨೦೬,೫೦೦.೦೦ ವೆಚ್ಚವಾಗುತ್ತದೆ.